ಹೆದ್ದಾರಿ–58 ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಯಾದ ಮೇಲೆ ಅದಕ್ಕೆ ಹಣ ಬಿಡುಗಡೆಯಾಗುವುದು ವಿಳಂಬವಾಗಬಹುದು ಎಂಬ ಅರ್ಥದಲ್ಲಿ ಅವರು ಪ್ರಶ್ನೆ ಕೇಳಿರಬೇಕು. ಆದರೆ, ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿ ದಂತಹ ಕೇಂದ್ರ ಸಚಿವರ ಗಮನಕ್ಕೆ ತಂದು ಕೆಲಸ ಮಾಡಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ ವೇನೆಂದರೆ, 3054 ಲೆಕ್ಕ ಶೀರ್ಷಿಕೆಯಡಿ ಬೇಕಾದಷ್ಟು ಹಣವಿದ್ದು, ಅದನ್ನು ಬಿಡುಗಡೆ ಮಾಡಿಲ್ಲ. ದಯವಿಟ್ಟು ಆ ಹಣವನ್ನು ಬಿಡುಗಡೆ ಮಾಡಿಸಿ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ : ಆಯಿತು ಮಾಡಿಸುತ್ತೇವೆ.

ಅಧ್ಯಕ್ಷರು : ಮಾನ್ಯ ಡಿ.ಕೆ. ಶಿವಕುಮಾರ್‌ರವರು ಈಗ ಪ್ರಸ್ತುತ ಸದನದಲ್ಲಿ ಹಾಜರಿಲ್ಲ, ಮಾನ್ಯ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ರವರು ಹಾಜರಿಲ್ಲ, ಮಾನ್ಯ ಬಾಲಕೃಷ್ಣ ಹೆಚ್.ಸಿ.ಯವರ ಪರವಾಗಿ ಕೆ.ರಾಜುರವರು ಪ್ರಶ್ನೆ ಕೇಳುತ್ತಾರೆ.

ಮಾಗಡಿ ತಾಲ್ಲೂಕಿನ ಹೆದ್ದಾರಿ 3 ರಲ್ಲಿ ಮಾಗಡಿಯಿಂದ ಗುಡೇಮಾರನಹಳ್ಳಿ ರಸ್ತೆ ಅಭಿವೃದ್ಧಿ

13 (798) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ–3 ರಲ್ಲಿ ಮಾಗಡಿಯಿಂದ–ಗುಡೇಮಾರನಹಳ್ಳಿ ವರೆಗಿನ ರಸ್ತೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಮೇಲ್ಪೈನ ಗುಂಡಿ ಮುಚ್ಚಲು 7(ಏಳು) ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಶೀಘ್ರವೇ ಡಾಂಬರೀಕರಣ ಕೈಗೆತ್ತಿಕೊಳ್ಳಲಾಗುವುದೆಂಬ ಆಶ್ವಾಸನೆ ನೀಡಿದ್ದರೂ ಸಹಾ ಯಾವುದೇ ಕೆಲಸ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆಯ ಪರಿಸ್ಥಿತಿಯ ಬಗ್ಗೆ ಕಳೆದ ವರ್ಷವೇ ಸಂಬಂಧಪಟ್ಟ ಸಚಿವರ ಖುದ್ದು ಭೇಟಿ ಮಾಡಿಸಿ ತಕ್ಷಣವೇ ಡಾಂಬರೀಕರಣ ಮಾಡಿ

ಕೊಡಲಾಗುವುದೆಂಬ ಆಶ್ವಾಸನೆ ನೀಡಿದ್ದರೂ ಸಹ ಮಾಡಿರುವುದಿಲ್ಲ. ಇನ್ನು ಎಷ್ಟು ದಿನಗಳಲ್ಲಿ ಡಾಂಬರೀಕರಣ ಮಾಡಿಕೊಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಾಗಡಿ ತಾಲ್ಲೂಕು ವ್ಯಾಪ್ತಿಗೆ ರಾಜ್ಯ ಹೆದ್ದಾರಿ–3 ಅಂದರೆ ಹುಣಸನಹಳ್ಳಿ–ಚಿಕ್ಕನಹಳ್ಳಿ ರಸ್ತೆಯ ಸರಪಳಿ 82.67 ರಿಂದ 118.30 ಕಿಮೀ ವರೆಗೆ ಒಟ್ಟಾರೆ 35.63 ಕಿಮೀ ಹಾದು ಹೋಗುತ್ತದೆ.

ಇದರಲ್ಲಿ ಮಾಗಡಿಯಿಂದ–ಗುಡೇಮಾರನಹಳ್ಳಿಯವರೆಗೆ ಸರಪಳಿ 94.00 ರಿಂದ 108.00 ಕಿಮೀ ವರೆಗೆ ಒಟ್ಟಾರೆ 14.00 ಕಿಮೀ ಉದ್ದವಿದ್ದು, ಈ ಭಾಗದಲ್ಲಿ ಅತೀ ವಾಹನ ಸಂಚಾರ ದಟ್ಟಣೆಯಿಂದ ಹಾಗೂ ವಾಹನ ಸಾಂದ್ರತೆ ಹೆಚ್ಚಾಗಿರುವುದರಿಂದ ಹಾಗೂ ರಸ್ತೆಯು ಗುಂಡಿಗಳನ್ನು ಮಾತ್ರ ಮುಚ್ಚಿರುವುದರಿಂದ ನವೀಕರಣವಿಲ್ಲದೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ರಸ್ತೆಗೆ ಲೆಕ್ಕಶೀರ್ಷಿಕೆ 3054–ಯೋಜನೆ–ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ ರೂ. 7.00 ಲಕ್ಷ ಅನುದಾನವನ್ನು 2008–09ನೇ ಸಾಲಿನಲ್ಲಿ ಬಿಡುಗಡೆಯಾಗಿದ್ದು, ಸರಪಳಿ 94.00 ರಿಂದ 118.30 ಕಿಮೀ ನಲ್ಲಿ ಒಟ್ಟು 24.30 ಕಿಮೀ ಉದ್ದಕ್ಕೆ ಸದರಿ ಮೊತ್ತದಲ್ಲಿ ರಸ್ತೆಯ ಮೇಲ್ಪೈನ ಗುಂಡಿಗಳನ್ನು ಮುಚ್ಚಲಾಗಿದೆ.

2009–10 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054– ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿ ರೂ.5.50 ಲಕ್ಷ ಅನುದಾನವು ನಿಗದಿಯಾಗಿದ್ದು, ಸರಪಳಿ 94.00 ರಿಂದ 108.00 ಕಿಮೀ ವರೆಗೆ ಒಟ್ಟು 14.00 ಕಿಮೀ ಉದ್ದಕ್ಕೆ ಸದರಿ ಮೊತ್ತದಲ್ಲಿ ರಸ್ತೆಯ ಮೇಲ್ಪೈನ ಗುಂಡಿಗಳನ್ನು ಮುಚ್ಚಲು ಮಾತ್ರ ಉಪಯೋಗಿಸಲಾಗಿರುತ್ತದೆ.

ಇ) ಈ ಭಾಗದ ರಸ್ತೆಯಲ್ಲಿ ಡಾಂಬರೀಕರಣದ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಮುಖ್ಯ ಇಂಜಿನಿಯರ್‌ರವರಿಗೆ ತಿಳಿಸಲಾಗಿದೆ. ಆದ್ಯತೆ ಯನುಸಾರ ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ಕೈಗೊಳ್ಳಲಾಗುವುದು.

Allocation of Grants Constituency wise

Report Description:— Details for Constituency Magadi (182) Name : Shri H.C.BALAKRISHNA

Const	Constituency Name	SC Popn	ST Popn	General Popn	MLA Name	Type
182	Magadi (182)	46,870	7,466	257,322	H.C. BALAKRISHNA	Rural

SCP 5054	SCP Nabard	Total SCP Grant	TSP 5054	TSP Nabard	Total TSP	Sum Of SCP TSP
30.34	26.59	56.92	3.08	3.35	6.43	63.35

Nanju 5054	Nanju Nabard	Nanju KRDCL	Total Nanjudappa	Suvarna raste	Total Amount
41.46	66.34	82.92	190.72	52.08	242.80

Total For Year 2009-10 **306.15**

Grant for the Previous Year 2008-09 Carried over

App08-09 bld I	App08-09 bld II	App08-09 Rd I	App08-09 Rd II	App08-09 New	App08-09 Total
175.82	0.00	4,152.91	0.00	0.00	4,328.73

3054 CMGSY	Nabard 08-09	12th Fin 08-09	CRF 08-09
54.38	90.00	39.27	0.00

Total For Year 2008-09 **4512.38**

Grand Total Lakhs **4818.53**

ಶ್ರೀ ಕೆ. ರಾಜು (ಶ್ರೀ ಹೆಚ್.ಸಿ. ಬಾಲಕೃಷ್ಣರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಈಗಾಗಲೇ ಕಳೆದ ಫೆಬ್ರವರಿ ತಿಂಗಳಿನಲ್ಲಿ ಕೂಡ ಈ ರಸ್ತೆಯ ಗುಂಡಿಗಳನ್ನು ಮುಚ್ಚುವುದಕ್ಕೆ ಮಾನ್ಯ ಬಾಲಕೃಷ್ಣರವರು ಮಾನ್ಯ ಮಂತ್ರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ, ಆ ಸ್ಥಳಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಗುಂಡಿಗಳನ್ನು ಮುಚ್ಚಿಸಿ ಬಿಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರೂ ಕೂಡ ಇದುವರೆಗೂ ಗುಂಡಿಗಳನ್ನು ಮುಚ್ಚಿಲ್ಲವೆಂದು ತಿಳಿದು ಬಂದಿದೆ. ದಯಮಾಡಿ ಏನು ನೀವು 7 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಆ ಹಣದ ಖರ್ಚು ಆದರೂ ಕೂಡ ಇನ್ನೂ ಪೂರ್ತಿ ಕೆಲಸವಾಗಿಲ್ಲವೆಂದು ಮಾನ್ಯ ಬಾಲಕೃಷ್ಣರವರು ತಿಳಿಸಿದ್ದಾರೆ. ದಯಮಾಡಿ ಆದಷ್ಟು ಬೇಗ ಆ ಕೆಲಸವನ್ನು ಮಾಡಬೇಕು. ಏಕೆಂದರೆ, ಆ ಸ್ಥಳಕ್ಕೆ ತಾವೇ ಹೋಗಿ ಪರಿಶೀಲನೆ ಮಾಡಿದ್ದೀರಿ. ಪರಿಶೀಲನೆ ಮಾಡಿ ಭರವಸೆ ಕೊಟ್ಟು ಒಂದು ವಾರದಲ್ಲಿ ಆ ಕೆಲಸವನ್ನು ಮುಗಿಸುತ್ತೇವೆಂದು ಹೇಳಿದ್ದೀರಿ. ಆದರೂ ಕೆಲಸ ಮುಗಿದಿಲ್ಲ ವೆಂದು ಮಾನ್ಯ ಬಾಲಕೃಷ್ಣರವರು ತಿಳಿಸಿದ್ದಾರೆ. ದಯಮಾಡಿ ಆದಷ್ಟು ಬೇಗ ಆ ಕೆಲಸವನ್ನು ಮುಗಿಸಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಅಧ್ಯಕ್ಷರೆ, ರಸ್ತೆಗಳಲ್ಲಿರುವಂತಹ ಗುಂಡಿ ಮುಚ್ಚಿಸುವಂತಹ ಕೆಲಸವನ್ನು ಸಂಪೂರ್ಣವಾಗಿ ಮಾಡಲಾಗಿದೆ. ಮಾನ್ಯ ಸದಸ್ಯರ ಬೇಡಿಕೆ ಏನಿದೆ ಎಂದರೆ ಉಳಿದ ಗುಂಡಿ ಮುಚ್ಚಿಸುವಂತಹ ಕೆಲಸಗಳನ್ನು ಮಾಡುತ್ತಿದ್ದೇವೆ. ನನಗೆ ಗೊತ್ತಿರುವ ಪ್ರಕಾರ ಅವರಿಗೆ ಬೇಕಾಗಿರುವುದು re-carpet ಆಗಬೇಕು ಎನ್ನುವ ಬೇಡಿಕೆ ಇದೆ. ಆ ಬೇಡಿಕೆಗೆ ಅನುಗುಣವಾಗಿ ಹಣಕಾಸಿನ ಲಭ್ಯತೆಯ ಮೇರೆಗೆ ಮಾಡಿಸಿಕೊಡುತ್ತೇವೆ ಎನ್ನುವ ಮಾತುಗಳನ್ನು ಹೇಳಿ ಭರವಸೆ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜ್ ಪಾಟೀಲ್ ಅಟ್ಟೂರುರವರು ಹಾಜರಿಲ್ಲ. ಮಾನ್ಯ ಬಸವರಾಜನ್ ಎಸ್.ಕೆ. ರವರು ಪ್ರಶ್ನೆ ಕೇಳಿ.

ಶ್ರೀ ಬಸವರಾಜನ್ ಎಸ್.ಕೆ. : 1509ನೇ ಪ್ರಶ್ನೆಯನ್ನು ಮಾನ್ಯ ತೋಟಗಾರಿಕೆ ಸಚಿವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಮಾನ್ಯ ತೋಟಗಾರಿಕಾ ಸಚಿವರಿಂದ ಉತ್ತರ ಬರಬೇಕು.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಮಾನ್ಯ ಸಚಿವರು ಹಾಜರಿಲ್ಲ. ಯಾರಿಗೆ authorize ಮಾಡಿದ್ದಾರೆ?